ಮಾಡಬೇಕಿತ್ತು. ಹಿರಿಯ ಅಧಿಕಾರಿಗಳು ವಿಶ್ರಾಂತಿ ತೆಗೆದುಕೊಳ್ಳುವ ಅವಧಿಗಳ ಅಂದಾಜು ಇದ್ದ ರಾಜಪ್ಪ, ಆ ಸಮಯದಲ್ಲಿ ಮೈಸೂರಿನಲ್ಲೇ ಇದ್ದ ಅವರ ಮನೆ ಸೇರಿ ನಿದ್ದೆ ಹೊಡೆಯುತ್ತಿದ್ದರು. ಬಹುತೇಕ ವೇಳೆ, ಡ್ರೈವರ್ ಆಥಿಉಂ ಇದೇ ಸಮಯದಲ್ಲಿ ಮನೆಗೆ ಹೋಗುತ್ತಿದ್ದ ಕಾರಣ, ಬೈಕ್ ಏರಿಕೊಂಡು ಸುತ್ತುವುದು ಮಾದೇಶನ ಕೆಲಸವಾಗುತ್ತಿತ್ತು. ಇದರಿಂದ ಅವನಿಗೆ ರೇಜಿಗೆ ಆಗಿತ್ತು. ಹಲವು ಬಾರಿ ಅವನೊಬ್ಬನೇ ಜೀಪು ಓಡಾಡಿಸಿಕೊಂಡು ಬರುವುದೂ ಇರುತ್ತಿತ್ತು.

ಇವತ್ತು ಬೆಳಗ್ಗೆ ಮತ್ತೆ ಅದೇ ಕಿರಿಕಿರಿ. ಕ್ರೂ ದಮ್ ಮಗಳಿಂದ ಮತ್ತೆ ಬೈಗುಳ. ಸ್ನಾನ ಮಾಡಿ ಎರಡು ದಿನ ಬೇರೆ ಆಗಿತ್ತು. ಎಲ್ಲೂ ಮಾಸ್ಕ್ ಸಿಗದ ಕಾರಣ ಇದ್ದ ಮಾಸ್ಕನ್ನೇ ತೊಳೆದು ಕಟ್ಟಿಕೊಂಡಿದ್ದ. ಎರಡು ದಿನದ ದೂಳು ಮತ್ತು ಇವನ ಸೀನುಗಳನ್ನು ಮೆತ್ತಿಕೊಂಡಿದ್ದ ಅದು ಗಬ್ಬುನಾತ ಹೊಡೆಯುತ್ತಿತ್ತು. ಹಾಗೂ ಹೀಗೂ ಮಾಡಿ, ರಾಜಪ್ಪರ ಮನೆಯ ಮುಂದೆ ಕುಳಿತು ರಾತ್ರಿ ಎರಡು ಗಂಟೆಯಿಂದ ಬೆಳಗಿನ ಐದರವರೆಗೆ ನಿದ್ದೆ ಹೊಡೆದಿದ್ದ. ಪುಣ್ಯಕ್ಕೆ ಜೀಪಿನ ಡ್ರೈವರ್ ಜೀಪನ್ನು ರಾಜಪ್ಪರ ಮನೆಯ ಮುಂದೆ ನಿಲ್ಲಿಸಿ, ಕೀಯನ್ನು ಇವನಿಗೆ ನೀಡಿ ಹೋಗಿದ್ದ. ಜೀಪಿನೊಳಗೆ ತೂರಿಕೊಂಡು ನಿದ್ದೆ ಮುಗಿಸಿಕೊಂಡಿದ್ದ. ಬೆಳಗಿನ ಐದಕ್ಕೆ ರಾಜಪ್ಪರ ಹೆಂಡತಿ ಹಾಲು ಬೇಕೆಂದ ಕಾರಣ, ಅಂಗಡಿಗೆ ಹೋಗಿಬಂದ. ಆರು ಗಂಟೆಗೆ ಹೊರಬಂದ ರಾಜಪ್ಪ, 'ಏ ಮಾದೇಸ್ ಒಂದು ಬೀಟ್ ಹಾಕಿ ಬಾರೋ' ಎಂದಾಗ, ಸರಿ ಎಂದು ಬೈಕ್ ಏರಿ ಹೊರಬಂದಿದ್ದ. ಒಂದು ಸುತ್ತು ಬಂದು, ಸೀನುಗಳು ಶುರುವಾದ ಕಾರಣ, ಮರವೊಂದರ ಕೆಳಗೆ ನಿಂತಿದ್ದ. ಆಗಲೇ ಕ್ರೂ ದಮ್ ರಾಜಪ್ಪರ ಮಗಳು ತನ್ನ ಬೈಗುಳಗಳ ಪದಸಂಪತ್ತಿನ ಪ್ರಯೋಗವನ್ನು ಮಾದೇಶನ ಮೇಲೆ ಮಾಡಿದ್ದು!

ಗಂಟೆ ಎಂಟೂವರೆಯಾಗುತ್ತಿತ್ತು. ಏರುತ್ತಿದ್ದ ಬಿಸಲಿಗೆ ಮೈಯೆಲ್ಲಾ ಅಂಟುತ್ತಿದ್ದರಿಂದ ಹೇಸಿಗೆ ಎನಿಸಿತು ಮಾದೇಶನಿಗೆ. ಬೈಕ್ ಏರಿ ಸೀದಾ ರಾಜಪ್ಪರ ಮನೆಗೆ ಹೋದ. ವರಂಡಾದಲ್ಲಿ ಪೇಪರ್ ನೋಡುತ್ತಾ ಇದ್ದ ರಾಜಪ್ಪರಿಗೆ ಸೆಲ್ಯೂಟ್ ಮಾಡಿ, "ಸಾರ್, ಸ್ವಲ್ಪ ಮನೆಗೆ ಹೋಗಿಬರ್ತೀನಿ. ಸ್ನಾನ ಮಾಡಿಕೊಂಡು, ಯೂನಿಫಾರಂ ಚೇಂಜ್ ಮಾಡಬೇಕು" ಎಂದ. "ವಾಕೆ. ಅಂಗೇ ಸ್ವಲ್ಪ ರೆಸ್ಟ್ ಮಾಡು. ನಾನೇ ಫೋನ್ ಮಾಡುವೆ" ಎಂದಾಗ, ಖುಷಿಯಾದ ಮಾದೇಶ ಮತ್ತೊಂದು ಸೆಲ್ಯೂಟ್ ಹೊಡೆದು ಅಲ್ಲಿಂದ ಹೊರಟ. ಬೈಕ್ ಅನ್ನು ಸ್ವಲ್ಪ ವೇಗವಾಗೇ ಓಡಿಸಿಕೊಂಡು ಕ್ವಾರ್ಟರ್ಸ್ ಸೇರಿಕೊಂಡ. ಮೈಸೂರು ನಗರದಿಂದ ಇಪ್ಪತ್ತು ಕಿಲೋಮೀಟರ್ ದೂರದ ಹಾದಿ ಮುಗಿದಿದ್ದೇ ಗೊತ್ತಾಗಲಿಲ್ಲ. ಮನೆ ಸೇರಿದ ಕೂಡಲೆ, ನೀರು ಕಾಯಲು ಹೀಟರ್ ಆನ್ ಮಾಡಿ, ಅವಲಕ್ಕಿ ನೆನಸಿಟ್ಟು, ಈರುಳ್ಳಿ, ಮೆಣಸಿಕಾಯಿ ಹೆಚ್ಚಿಟ್ಟ. ಫೋನನ್ನು ಚಾರ್ಜಿಗೆ ಹಾಕಿಟ್ಟು ಸ್ನಾನಕ್ಕೆ ಹೋದವನು ಸ್ನಾನ ಮುಗಿಸಿದ ನಂತರ ಬಟ್ಟೆಯನ್ನು ಒಗೆದು ಒಣಗಲು ಹಾಕಿ ಅಡುಗೆ ಮನೆಗೆ ಬಂದ. ಅವಲಕ್ಕಿ ಉಪ್ಪಿಟ್ಟು ಮಾಡಿದ ಮೇಲೆ, ಫೋನ್ ಆನ್ ಮಾಡಿಕೊಂಡು ತಿನ್ನಲು ಕುಳಿತ.

ಕುಳಿತ ಒಂದೆರಡು ನಿಮಿಷಕ್ಕೆ ಮನೆಯಿಂದ ಫೋನ್ ಬಂತು. "ತಿಂಡಿ ಮಾಡಿದ್ಯಾ..." ಎಂದು ಕೇಳಿದ ಅಮ್ಮ, ಅವನ ಮರುಮಾತಿಗೆ ಅವಕಾಶ ನೀಡದೆ, "ಅಪ್ಪನಿಗೆ ಉಸಾರಿಲ್ಲ ಕಣೋ" ಎಂದರು.

"ಯಾವಾಗಿನಿಂದ?"

"ರಾತ್ರಿಯಿಂದ. ನಿಮ್ಮ ಚಿಕ್ಕಪ್ಪ, ಬೆಳಗ್ಗೇನೆ ರಂಗಪ್ಪ ಡಾಕ್ಟ್ರ ಹತ್ರ ಕರ್ಕೊಂಡು ಹೋಗಿದ್ರು. ಇಂಜೆಕ್ಷನ್ ಕೊಟ್ಟು ಕಳ್ಸವರೆ. ಯಾಕೋ ಜೀವ ನಡುಗ್ತದೆ ಕಣೋ. ಅದೇನೊ ಹೊಸಾ ರೋಗ ಬಂದದೆ ಅಂತಾರೆ. ಗೂರಲು ಇರೋರ್ಗೆ ಜಾಸ್ತಿ ಎಫೆಕ್ಟ್ ಅಂತಾರೆ."

"ಏನೂ ಆಗೋಲ್ಲ. ನೀನು ಅಪ್ಪನನ್ನು ಚೆನ್ನಾಗಿ ನೋಡಿಕೋ. ನನಗೆ ಇಲ್ಲಿ ಡ್ಯೂಟಿ ಮೇಲೆ ಹಾಕಿದ್ದಾರೆ. ಅವಕಾಶ ಆದ ತಕ್ಷಣ ಬರುತ್ತೇನೆ" ಎಂದು ಅಮ್ಮನನ್ನು ಸಮಾಧಾನಿಸಿ ಕಾಲ್ ಕಟ್ ಮಾಡಿ ಅವಲಕ್ಕಿ ಉಪ್ಪಿಟ್ಟು ತಿನ್ನುವುದನ್ನು ಮುಂದುವರಿಸಿದ.